ಕೂಡ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕು. ಡಿವಿಷನಲ್ ಕಮಿಷನರ್ ಆಗಲೀ ಬೇರೆ ಬೇರೆ ಹುದ್ದೆಗಳು ಐ.ಎ.ಎಸ್.ಮತ್ತು ಐ.ಪಿ.ಎಸ್ ಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದೇವೆ ಅದು ಕಡಿಮೆ ಮಾಡಬೇಕಾಗಿದೆ. ಕಡಿಮೆ ಮಾಡುವಾಗ ಕೆಲವು ಅಧಿಕಾರಿಗಳು ಹೆಚ್ಚಾದರೆ ಬೇರೆ ಕಡೆ ಕಳುಹಿಸಬೇಕಾಗುತ್ತದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಎಲ್ಲವನ್ನೂ ಕೂಡ ವಿವರವಾಗಿ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಅಡ್ಮಿನಿಸ್ಟ್ರೇಟೀವ್ ಪಾಯಿಂಟ್‌ನಿಂದ ನೋಡಿ ಕ್ರಮ ತೆಗೆದುಕೊಳ್ಳುತ್ತದೆ.

9ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ

ರಾಜಶ್ರೀ ಸಿಮೆಂಟ್ ಕಾರ್ಖಾನೆಯವರಿಂದ ತೆರಿಗೆಯ ಬಾಕಿ

633. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 50-60 ಲಕ್ಷ ರೂಪಾಯಿ ವಾಣಿಜ್ಯ ತೆರಿಗೆಯ ಬಾಕಿಯನ್ನು ಕೊಡಬೇಕಾಗಿರುವುದು ನಿಜವೆ;

ಆ) ಗುಲ್ಬರ್ಗಾ ಜಿಲ್ಲೆಯ ವಾಣಿಜ್ಯ ತೆರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ವಸೂಲಿಯ ಕ್ರಮ ಕೈಗೊಳ್ಳುವುದರಲ್ಲಿ ವಿಫಲ ಹೊಂದಿರುವುದು ನಿಜವೆ:

ಇ) ಇಷ್ಟು ದೊಡ್ಡ ಮೊತ್ತದ ಹಣವನ್ನು ವಸೂಲಿ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ನಿಜವಲ್ಲ. ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 1984-85ನೇ ಸಾಲಿಗೆ ಸಂಬಂಧಿಸಿದಂತೆ 5.96 ಲಕ್ಷ ರೂ.ಗಳ ಮಾರಾಟ ತೆರಿಗೆ ಬಾಬ್ತು ಮಾತ್ರ ಬಾಕಿ ಇದ್ದು ವಿಧಿಸಿರುವ ಈ ತೆರಿಗೆ ವಿರುದ್ಧ ಸದರಿ ಕಂಪೆನಿಯವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಆ) ನಿಜವಲ್ಲ. ಬಾಕಿ ಇರುವ 5.95 ಲಕ್ಷ ರೂ.ಗಳ ಮಾರಾಟ ತೆರಿಗೆ ವಸೂಲಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ತನ್ನ ಆದೇಶ ಸಂಖ್ಯೆ : ಎಸ್‌ಟಿವಿ:24:90-91 ದಿನಾಂಕ 3-1-91ರಲ್ಲಿ ತಡೆಯಾಜ್ಞೆ ನೀಡಿದ್ದು, ಪ್ರಾಧಿಕಾರದ ಆದೇಶಾನುಸಾರ ಕಂಪೆನಿಯವರು ಬ್ಯಾಂಕ್ ಜಾಮೀನು ನೀಡಿರುತ್ತಾರೆ. ಈ ತಡೆಯಾಜ್ಞೆ ಜಾರಿಯಲ್ಲಿರುವವರೆಗೆ ಬಾಕಿ ವಸೂಲಿ ಮಾಡಲು ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಅವಕಾಶವಿರುವುದಿಲ್ಲ.

ಇ) ಮೇಲ್ಮನವಿ ಇತ್ಯರ್ಥವಾದ ತಕ್ಷಣ ಮೇಲ್ಮನವಿಯ ತೀರ್ಮಾನಕ್ಕೆ ಒಳಪಟ್ಟು ತೆರಿಗೆ ಬಾಕಿಯನ್ನು ವಸೂಲಿ ಮಾಡಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಸಭಾಧ್ಯಕ್ಷರೇ, 'ಅ' ಪ್ರಶ್ನೆಗೆ ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 50-60 ಲಕ್ಷ ರೂಪಾಯಿ ವಾಣಿಜ್ಯ ತೆರಿಗೆಯ ಬಾಕಿಯನ್ನು ಕೊಡಬೇಕಾಗಿರುವುದು

ನಿಜವೇ ಎಂಬುದಕ್ಕೆ ನಿಜವಲ್ಲ ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ಹಣ ಬಾಕಿ ಇದ್ದು ಇಷ್ಯರಲ್ಲೇ ಪಾವತಿ ಮಾಡಿರುವುದು ನಿಜವಲ್ಲವೆ? ಅಲ್ಲದೆ 1984-85ನೇ ಸಾಲಿಗೆ ಸಂಬಂಧಿಸಿದಂತೆ 5,96,000 ರೂಪಾಯಿ ಬಾಕಿ ಇದೆ ಎಂದು ತಿಳಿಸಿದ್ದಾರೆ.

'ಅ' ಪ್ರಶ್ನೆಗೆ ಉತ್ತರವಾಗಿ ಈ ಋಣಕ್ಕೆ ತಡೆ ಆಜ್ಞೆಯನ್ನು 3-1-91ರಲ್ಲಿ ತಂದಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ನಮ್ಮ ವಾಣಿಜ್ಯ ತೆರಿಗೆ ಇಲಾಖೆಯವರು 5-6 ವರ್ಷಗಳ ಕಾಲ ವಸೂಲಿ ಮಾಡುವಲ್ಲಿ ವಿಫಲಗೊಂಡ ಕಾರಣ ವಿಳಂಬ ಅವಧಿಯನ್ನು ಉಪಯೋಗಿಸಿಕೊಂಡು ತಡೆ ಆಜ್ಞೆ ತರಲು ಅವಕಾಶ ಮಾಡಿದ್ದುದು ತಪ್ಪು ಅಲ್ಲವೆ? ಒಂದು ವೇಳೆ ಇದೇ ರೀತಿ ರೈತರು ಕೊಡುವ ಸಾಲವನ್ನು 5-6 ವರ್ಷ ವಿಳಂಬ ಮಾಡಿದರೆ ಅವರ ಮೇಲೆ ಬಡ್ಡಿ, ಸುಸ್ತಿ ಬಡ್ಡಿ ಹಾಕಿ ವಸೂಲಿ ಕ್ರಮ ತೆಗೆದುಕೊಂಡು ಅವನ ಹಂಡೆ ಪಂಡೆ ಬಜಾರ್‌ನಲ್ಲಿ ಹಾಕಿ ಅವನ ಮರ್ಯಾದೆ ತೆಗೆಯುವುದಿಲ್ಲವೇ? ಇವತ್ತು ಕೋಟ್ಯಾಂತರ ರೂಪಾಯಿ ...

ಛೇರ್‌ಮನ್ : ಪ್ರಶ್ನೆ ಕೇಳಿ ಸ್ವಾಮಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಕೋಟ್ಯಾಂತರ ರೂಪಾಯಿ ಲಾಭ ಪಡೆಯುವ ಈ ಬಿರ್ಲಾ ಅಂತಹವರಿಂದ ತೆರಿಗೆಯನ್ನು ವಸೂಲಿ ಮಾಡದೇ ಅವರು ತಡೆ ಆಜ್ಞೆ ತರಲು ಅವಕಾಶ ಕೊಟ್ಟಿದ್ದುದು ಏಕೆ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಪತಿಗಳೇ ಮಾನ್ಯ ಬಸವಂತರೆಡ್ಡಿಯವರ ಕ್ಷೇತ್ರದಲ್ಲಿ ಈ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿ ಇದೆ. ಅವರಿಗೆ ಇದು ಗೊತ್ತಿದ್ದುದರಿಂದ ಈ ಪ್ರಶ್ನೆ ಕೇಳಿದ್ದಾರೆ. ಆ ಕಾರ್ಖಾನೆಯವರಿಂದ 5.96 ಲಕ್ಷ ರೂಪಾಯಿಗಳು ಬರಬೇಕಾಗಿದ್ದು ಆ ಬಗ್ಗೆ ಅವರು ಅಪಲೇಟ್ ಟ್ರಿಬ್ಯುನಲ್ಸ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಸ್ಟೇ ಇರುವ ಕಾರಣ ವಸೂಲಿ ಆಗಿಲ್ಲ. ಅದಕ್ಕೆ ಸ್ಟೇ ವೆಕೇಟ್ ಮಾಡಿಸಬೇಕಾಗುತ್ತದೆ. ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ಸ್ ಉದ್ದೇಶಪೂರ್ವಕವಾಗಿ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇದು ಆ ರೀತಿ ಅಲ್ಲ. ಸ್ಟೇ ಆರ್ಡರ್‌ನ್ನು ನಾವು ವೆಕೇಟ್ ಮಾಡಿಸುತ್ತೇವೆ. ವೆಕೇಟ್ ಮಾಡಿಸಿದ ಮೇಲೆ 5.96 ಲಕ್ಷ ರೂ.ಗಳನ್ನು ಏನು 1984-85ನೇ ಸಾಲಿನದ್ದು ಬಾಕಿ ಇದೆ ಅದನ್ನು ವಸೂಲಿ ಮಾಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : 5-6 ವರ್ಷ ವಿಳಂಬ ಮಾಡಿದ್ದಕ್ಕೆ ಅದನ್ನು ಉಪಯೋಗಿಸಿಕೊಂಡು ಸ್ಟೇ ತಂದಿದ್ದಾರೆ.

ಶ್ರೀ ಧರ್ಮಸಿಂಗ್ : ವಿಳಂಬ ಆಗಿದೆ ಎಂದು ಇವತ್ತು ಇಲ್ಲಿ ಬಂದಿದೆ. ಇದನ್ನೂ ಕೂಡ ನಾವು ತೀವ್ರವಾಗಿ ಪರಿಗಣಿಸಿ ವಸೂಲಿಗೆ ಪ್ರಯತ್ನ ಮಾಡುತ್ತೇವೆ.

ಉಪಾಧ್ಯಕ್ಷರು : ಈಗ 11ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಎ.ಬಿ. ಮಲಕರೆಡ್ಡಿಯವರ ಪ್ರಶ್ನೆ.

ಡಾ: ಎ.ಬಿ. ಮಲಕಾರೆಡ್ಡಿ : ನನಗೆ ಉತ್ತರವೇ ಬಂದಿಲ್ಲ.

ಉಪಾಧ್ಯಕ್ಷರು : ಇದಕ್ಕೆ ಉತ್ತರ ಬಂದಿಲ್ಲ. ಇದನ್ನು ತಡೆಹಿಡಿಯಲಾಗಿದೆ. ಈಗ ಪೆರಿಕಲ್ ಎಂ. ಮೆಲ್ಲಪ್ಪನವರ ಪ್ರಶ್ನೆ.